# ಅಟ್ಟ

■ ಕೆ.ವಿ. ರಾಜಲಕ್ಷ್ಮಿ
ಕಲೆ: ಸಂತೋಷ್ ಸಸಿಹಿತ್ಲು

‘ಈ ಫಾರಂಗಳನ್ನೆಲ್ಲ ಭರ್ತಿ ಮಾಡಬೇಕು. ಏನಾದರೂ ಡೌಟ್ಸ್ ಇದ್ದರೆ ಇಲ್ಲೇ ಕೇಳಿ ತಿಳಿದುಕೊಂಡರೆ ಒಳ್ಳೆಯದು ಇಲ್ಲದಿದ್ದರೆ ಸಣ್ಣಪುಟ್ಟ ವ್ಯತ್ಯಾಸಕ್ಕೂ ಆಫೀಸಿಗೂ ಮನೆಗೂ ಅಲೆದಾಟ ತಪ್ಪಿದ್ದಲ್ಲ, ನೋಡಿ’ ಎಂದು ಹೇಳಿ ಅರ್ಜಿ ಕೊಟ್ಟಿದ್ದರು ಹೆಚ್‌ಆರ್ ಡಿಪಾರ್ಟ್‌ಮೆಂಟ್‌ನ ಕೇಸ್ ಅಸಿಸ್ಟೆಂಟ್.

‘ಸರಿ’ ಎನ್ನುತ್ತ ಎದುರಿಗಿದ್ದ ವೈಟಿಂಗ್ ಹಾಲ್‌ನಲ್ಲಿ ಕುಳಿತು ಒಂದೊಂದೇ ಹಾಳೆಯನ್ನು ತಿರುಗಿಸತೊಡಗಿದೆ. ಕೇಳಿರುವ ಮಾಹಿತಿ ಎಲ್ಲ ನನ್ನ ಬಳಿ ಇದೆ. ‘ಪರಿಚಿತರ ಸಹಿ’ ಎಂದರೆ ಆಫೀಸಿನವರದೋ ಅಥವಾ ನನಗೆ ತಿಳಿದ ಹೊರಗಡೆಯವರದ್ದಾದರೂ ಆದೀತೆ? ಈ ಗೊಂದಲ ತಲೆಗೆ ಹೊಕ್ಕಾಗ ಮತ್ತೆ ಫಾರಂ ಕೊಟ್ಟ ಕೇಸ್ ಅಸಿಸ್ಟೆಂಟ್ ಬಳಿ ಹೋಗಿ ನನ್ನ ಸಂಶಯ ಹೊರಗಿಟ್ಟೆ.

‘ಇಲ್ಲಿಯವರದೇ ಆದರೆ ಉತ್ತಮ. ಚಿಂತಿಸಬೇಡಿ ಇಲ್ಲಿ ಸಬ್ಮಿಟ್ ಮಾಡುವಾಗ ಸೇಲ್ಸ್ ಡಿಪಾರ್ಟ್‌ಮೆಂಟ್‌ನಿಂದ ಯಾರನ್ನಾದರೂ ಕರೆಯೋಣ’ ಎಂದು ನಕ್ಕು ಭರವಸೆಯಿತ್ತಾಗ ನಿರಾಳವೆನಿಸಿತು.

***

ಬೀಗ ತೆಗೆದು ಮನೆ ಬಾಗಿಲು ತೆಗೆಯುವಾಗ ಗಂಟೆ ಮೂರನ್ನು ದಾಟಿತ್ತು. ಸೀರೆ ಬದಲಿಸಿ ಮುಖಕ್ಕೆ ನೀರೆರೆಚಿ ನೈಟಿ ಧರಿಸಿದೆ. ಸ್ವಲ್ಪ ಹಾಯೆನಿಸಿತು. ಬೆಳಿಗ್ಗೆ ಮಾಡಿದ್ದ ಉಪ್ಪಿಟ್ಟು ಇನ್ನೂ ಉಳಿದಿತ್ತು. ಅದನ್ನೇ ಬಿಸಿ ಮಾಡಿ ತಿಂದು ರೂಮಿನಲ್ಲಿ ಮಂಚದ ಮೇಲೆ ಉರುಳಿದೆ. ಒಂಟಿ ಜೀವನ ಶುರುವಾಗಿ ನಾಲ್ಕು ತಿಂಗಳ ಸಮೀಪ. ಮಗ, ಹೇಮಾಂಗ, ಎಂಜಿನಿಯರಿಂಗ್ ಸೇರುವಾಗ ಸರ್ಕಾರೀ ಕಾಲೇಜಿಗೆ ಸೇರಿದ್ದ. ಬೇರೆ ಊರಾದರೂ ಪರವಾಗಿಲ್ಲ, ಕಾಲೇಜು, ಹಾಸ್ಟೆಲ್ ವೆಚ್ಚ ಎಲ್ಲ ಕಡಿಮೆ ಇರುತ್ತೆ. ಇಲ್ಲಿ ಸರ್ಕಾರೀ ಕೋಟಾ ಖಾಸಗಿ ಕಾಲೇಜಾದರೂ ಲಕ್ಷಗಟ್ಟಲೆ ಆಗುತ್ತೆ ಎನ್ನುವ ವಾದ. ಆಗಲೇ ಐದನೇ ಸೆಮಿಸ್ಟರ್ ಶುರುವಾಗಿದೆ. ‘ಅದೇನು ಹೇಮಾಂಗ ಅನ್ನೋ ಹೆಸರು? ಹೇಮಾ, ಹೇಮೀ ಅಂತ ಕರೆದರೆ ಹೆಣ್ಣು ಮಗು ಅಂದ್ಕೊಳ್ಳೋಲ್ವಾ?’ ಮನೆಯವರೆಲ್ಲರ ಕುತೂಹಲಬೆರೆತ ಕುಹಕ. ಅದೇನೋ ನನ್ನ ಪುಣ್ಯ ನನ್ನವರು ವಿರೋಧಿಸಿರಲಿಲ್ಲ. ಸಣ್ಣವಳಿದ್ದಾಗ ನಾವಿದ್ದ ವಠಾರದ ಕೊನೆಯ ಮನೆಯಲ್ಲಿ ನಿತ್ಯ

